### ಇಂದಿನ ಶುಭಾಷಿತ

ಸೂರ್ಯನಂತೆ ಹೊಳೆಯುವ ಆಸೆ ನಿಮಗಿದ್ದರೆ ಮೊದಲು ಸೂರ್ಯನಂತೆ ಹೊತ್ತಿ ಉರಿಯುವುದನ್ನು ಕಲಿಯಿರಿ...

– ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

ಲೋಕದರ್ಶನ

ಶುಕ್ರವಾರ 23 ಡಿಸೆಂಬರ್ 2022

## ಸದನದ ಕಲಾಪಕ್ಕೆ ಹಾಜರಾಗುವದು ಕಡ್ಡಾಯವಾಗಬೇಕು

ಶಾಸನ ಸಭೆಯಿರಲಿ, ಸಂಸತ್ತೇ ಇರಲಿ, ಇರುವದು ಜನಪ್ರತಿನಿಧಿಗಳ ಸಲುವಾಗಿ. ಜನಪ್ರತಿನಿಧಿಗಳು ಇರುವುದು ಜನರ ಸಲುವಾಗಿ. ಅಧಿವೇಶನ ನಡೆಸುವದು ಜನರ ಸಲುವಾಗಿ. ಮತ ಹಾಕಿದ ಜನರ ಮತ್ತು ಮತಕ್ಷೇತ್ರಗಳ ಅವಶ್ಯಕತೆಗಳನ್ನು, ಅಭಿವೃದ್ಧಿ ವಿಷಯಗಳನ್ನು ಬೇಕುಬೇಡಿಕೆಗಳನ್ನು ಸರಕಾರ ಗಮನಕ್ಕೆ ತಂದು ಸೂಕ್ತ ಪರಿಹಾರ ಒದಗಿಸುವದು ಶಾಸಕ ಸಂಸದರ ಆದ್ಯ ಕರ್ತವ್ಯ. ಅದಕ್ಕಾಗಿ ಅಧಿವೇಶನದ ಸಂದರ್ಭದಲ್ಲಿ ಕಲಾಪಗಳಲ್ಲಿ ಭಾಗವಹಿಸಿ, ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ತಮ್ಮ ಮತಕ್ಷೇತ್ರದ ಸಮಸ್ಯೆಗಳತ್ತ ಸರಕಾರದ ಗಮನ ಸೆಳೆಯುವದು, ಅಗತ್ಯ ಆರ್ಥಿಕ ನೆರವು ಪಡೆಯುವದು ಬಹಳ ಮಹತ್ವದ ಸಂಗತಿ. ಆದರೆ ಈಚಿನ ಕೆಲ ವರ್ಷಗಳಲ್ಲಿ ಜನಪ್ರತಿನಿಧಿಗಳು ಅಧಿವೇಶನದ ಕಲಾಪಗಳಿಗೆ ಹಾಜರಾಗದೆ ತಮ್ಮ ತಮ್ಮ ವೈಯಕ್ತಿಕ ಕೆಲಸಗಳಲ್ಲಿ ತೊಡಗಿಕೊಂಡಿರುವದನ್ನು ಕಾಣುತ್ತಿದ್ದೇವೆ. ಸದನದ ಅರ್ಧಕ್ಕಿಂತ ಹೆಚ್ಚು ಶಾಸಕರು ಗೈರುಹಾಜರಾಗುವದಾದರೆ ಅಧಿವೇಶನ ನಡೆಸುವದಾದರೂ ಯಾಕೆ ಮತ್ತು ಯಾರಿಗಾಗಿ ಎಂದು ಕೇಳಬೇಕಾಗುತ್ತದೆ. ಈ ತರಹದ ನಿರ್ಲಕ್ಷ್ಯ ಮತ ಹಾಕಿ ಆರಿಸಿ ತಂದ ಜನರಿಗೆ ಮಾಡುವ ವಿಶ್ವಾಸದ್ರೋಹವೆಂದೇ ಹೇಳಬೇಕಾಗುತ್ತದೆ. ರಾಜ್ಯದ ಜನರ ಸೇವೆಗಾಗಿ ಇವರನ್ನು ಆಯ್ಕೆ ಮಾಡಲಾಗಿದೆಯೇ ಹೊರತು ಅವರ ಸ್ವಂತದ ಅಭಿವೃದ್ಧಿಗಾಗಿ ಅಲ್ಲ.

ರಾಜ್ಯದಲ್ಲಿ ಸಮಸ್ಯೆಗಳಿಗೆ ಬರಗಾಲವೇನಿಲ್ಲ. ಅನೇಕ ಬಗೆಯ ಕುಂದುಕೊರತೆಗಳು ಕಾಡುತ್ತಲೇಇವೆ. ನಿನ್ನೆ ಬೆಳಗಾವಿಯ ಚಳಿಗಾಲದ ಅಧಿವೇಶನದ ಕಾಲಕ್ಕೆ ಮಕ್ಕಳಿಗೆ ಶಾಲೆಗೆ ಹೋಗುವದಕ್ಕೆ ಸರಿಯಾದ ಬಸ್ಸುಗಳ ವ್ಯವಸ್ಥೆ ಇಲ್ಲದೇ ಇರುವ ಬಗ್ಗೆ ಸದಸ್ಯರು ಸಾಕಷ್ಟು ದೂರುಗಳನ್ನು ಹೇಳಿದರು. ಅದಕ್ಕೆ ಉತ್ತರಿಸುತ್ತ ಸಾರಿಗೆ ಸವಮಚಿವ ಶ್ರೀರಾಮುಲು ಅವರು ಕೆಲವು ಕಡೆ ರಸ್ತೆ ಸರಿಯಾಗಿಲ್ಲದ್ದರಿಂದ ಬಸ್ಸು ಬಿಡುವದು ಸಾಧ್ಯವಾಗುತ್ತಿಲ್ಲ ಎಂಬ ವಿವರಣೆ ನೀಡಿದರು. ಸರಿಯಾದ ರಸ್ತೆ ಇದಗಿಸುವದು ಯಾರ ಜವಾಬ್ದಾರಿ? ಸರಕಾರದ್ದೇ ತಾನೆ? ಸ್ವಾತಂತ್ರ್ಯ ಬಂದು 75 ವರ್ಷಗಾದ ನಂತರವೂ ಜನಸಂಚಾರಕ್ಕೆ ಸರಿಯಾದ ರಸ್ತೆಗ? ನಿರ್ಮಾಣವೇ ಆಗಿಲ್ಲ ಎಂದಾದರೆ ಈವರೆಗಿನ ಸರಕಾರಗಳು ಏನು ಮಾಡಿದವು ಎನ್ನುವ ಪ್ರಶ್ನೆ ಸಹಜ. ಕೆಲವೊಂದು ಹಳ್ಳಿಗಳಿಗೆ ಸಂಪರ್ಕ ರಸ್ತೆಗಳೂ ಇಲ್ಲ, ನದಿಗಳಿಗೆ ಸೇತುವೆಗಳೂ ಇಲ್ಲ. ಕಾಯಿಲೆ ಬಿದ್ದರೆ ರೋಗಿಯನ್ನು ಆಸ್ಪತ್ರೆಗೆ ಒಯ್ಯಲು ಚಕ್ಕಡಿಯನ್ನೋ ಡೋಲಿಯನ್ನೋ ಬಳಸಿ ಹೊತ್ತೊಯ್ಯುವ ಕೆಟ್ಟ ಪರಿಸ್ಥಿತಿ ಇದೆ. ಇದು ನಾಚಿಕಗೇಡಿತನ. ಪ್ರತಿ ವರ್ಷ ಬಜೆಟ್ಟಗಳಲ್ಲಿ ಘೋಷಿಸುವ ಕೋಟಿ ಕೋಟಿ ಹಣ ಯಾತಕ್ಕಾಗಿ ಖರ್ಚಾಗುತ್ತದೆ? ಯಾರ ಜೇಬು ಸೇರುತ್ತದೆ? ಇದು ಜನರು ಕೇಳುವ ಪ್ರಶ್ನೆ. ಪ್ರತಿಯೊಂದು ಸರಕಾರವೂ ತಾನು ಅದ್ಭುತ ಪ್ರಗತಿ ಸಾಧಿಸಿರುವದಾಗಿ ಹೇಳಿಕೊಳ್ಳುತ್ತದೆ. ಜನರಿಗೆ ಸುಳ್ಳು ಭರವಸೆಗಳನ್ನು ನೀಡುವದರಲ್ಲಿಯೇ ಕಾಲ ಕಳೆಯುವ ಸರಕಾರಗಳು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರೆ ಈಗಿನ ಕುಂದುಕೊರತೆಗಳು ಹೇಗೆ ಉಳಿಯುತ್ತಿದ್ದವು? ಆಯ್ಕೆಯಾದ ಪ್ರತಿನಿಧಿಗಳು ತಮ್ಮ ತಮ್ಮ ಮತಕ್ಷೇತ್ರದ ಅಭಿವೃದ್ಧಿ ಮಾಡಿದ್ದರೆ ಸಾಕಿತ್ತು ಇಡೀ ರಾಜ್ಯ ತನ್ನಿಂದ ತಾನೇ ಪರಿಪೂರ್ಣ ಪ್ರಗತಿ ಸಾಧಿಸುತ್ತಿತ್ತು. ಶಾಸಕರಿಗೆ, ಸಂಸದರಿಗೆ ಜನಪರ ಕಾಳಜಿ ಇದ್ದಾಗ ಮಾತ್ರ ಜನರ ಆಶೋತ್ತರಗಳು ಈಡೇರಲು ಸಾಧ್ಯ. ಜನಪ್ರತಿನಿಧಿಗಳು ಸ್ವಾರ್ಥಿಗಳೂ ಭ್ರಷ್ಟರೂ ನಿಷ್ಕ್ರಿಯರೂ ಆದಾಗ ರಾಜ್ಯದ ಪ್ರಗತಿ ಕಾಗದದಲ್ಲಿ ಮಾತ್ರ ಆಗಿರುತ್ತದೆ. ಈಗ ಆಗಿರುವದೂ ಅದೇ. ಅನರ್ಹರನ್ನು ಆರಿಸಿತರುವ ಮತದಾರರೂ ಇದಕ್ಕೆ ಅಷ್ಟೇ ಜವಾಬ್ದಾರರೆನಿಸುತ್ತಾರೆ.

## ಹೆಲ್ತ್ ಟಿಪ್ಸ್

### ಹಲ್ಲು ನೋವಿಗೆ ಮನೆಮದ್ದುಗಳು

ನಿಮಗೆ ಸಹಿಸಿಕೊಳ್ಳಲಾರದಷ್ಟು ಹಲ್ಲು ನೋವು ಬಂದಿದೆಯೇ? ಚಿಂತಿಸಬೇಡಿ, ಇಲ್ಲಿವೆ ಕೆಲವು ಸುಲಭವಾದ ಮನೆ ಪರಿಹಾರಗಳು.

ಯಾವ ನೋವನ್ನು ಬೇಕಾದರೂ ತಡೆದುಕೊಳ್ಳಬಹುದು, ಆದರೆ ಹಲ್ಲು ನೋವನ್ನು ಮಾತ್ರ ತಡೆದುಕೊಳ್ಳಲು ಆಗುವುದೇ ಇಲ್ಲ. ಈ ರೀತಿಯ ಮಾತುಗಳನ್ನು ನಾವು ಮನೆಯಲ್ಲಿ ಯಾರಿಂದ ಲಾದರೂ ಕೇಳಿಯೇ ಇರುತ್ತೇವೆ. ಅಂದರೆ ಅವರ ಮಾತಿನಲ್ಲಿ ಹಲ್ಲು ನೋವು ಎಂತಹ ಕರಾಳ ಭಾದೆ ಕೊಡುತ್ತದೆ ಎಂಬುದು ತಿಳಿಯುತ್ತದೆ.

ಇದು ನಿಜ ಕೂಡ. ನೋಡಲು ಚಿಕ್ಕ ಚಿಕ್ಕದಾಗಿ ಕಾಣುವ ಬಾಯಲ್ಲಿರುವ ಹಲ್ಲುಗಳು ತಮಗೆ ಕಾಯಿಲೆ ಬಂದಾಗ ಅದನ್ನು ತುಂಬಾ ಗಾಡವಾದ ನೋವಿನ ಮೂಲಕ ವ್ಯಕ್ತಪಡಿಸುತ್ತವೆ. ಹಲ್ಲು ನೋವಿಗೆ ಹಲವಾರು ಪರಿಹಾರಗಳು ಇರಲಿವೆ. ಆದ-ರೆ ನೈಸರ್ಗಿಕವಾಗಿ ಕೆಲವೊಂದು ಮನೆಮದ್ದುಗಳು ಅತ್ಯಂತ ಪರಿಣಾಮಕಾರಿ ಎಂದು ಈ ಹಿಂದಿನಿಂದಲೂ ಸಾಬೀತಾಗಿದೆ. ಅಂತಹ ಪರಿಹಾರಗಳ ಬಗ್ಗೆ ಇಲ್ಲಿ ತಿಳಿಯೋಣ ಬನ್ನಿ.

ಲವಂಗ ಬಳಕೆ ಮಾಡುವುದು : ಲವಂಗ ಹಲ್ಲು ನೋವಿಗೆ ರಾಮಬಾಣ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಏಕೆಂದರೆ ಹಲ್ಲುನೋವನ್ನು ಉಪಶಮನ ಮಾಡುವಂತಹ ಗುಣ ಲಕ್ಷಣ ಲವಂಗದಲ್ಲಿ ಕಂಡು ಬರುತ್ತದೆ.

ಇದರಲ್ಲಿ ಆಂಟಿ ಇನ್ಫಾಮೇಟರಿ, ಆಂಟಿ ಬ್ಯಾಕ್ಟೀರಿಯಲ್ ಪ್ರಭಾವ ಇರುವುದರಿಂದ ಜೊತೆಗೆ ಆಂಟಿ ಆಕ್ಸಿಡೆಂಟ್ ಸಹ ಇರುವುದರಿಂದ ಹಲ್ಲು ನೋವಿನ ವಿಚಾರದಲ್ಲಿ ಹೆಚ್ಚು ಪ್ರಯೋಜನಗಳನ್ನು ಇದರಿಂದ ನಿರೀಕ್ಷೆ ಮಾಡಬಹುದು. ಕೇವಲ ಹಲ್ಲುಗಳ ನೋವು ಮಾತ್ರವಲ್ಲದೆ ವಸಡುಗಳ ಸೋಂಕನ್ನು ಸಹ ಲವಂಗ ಪರಿಹಾರ ಮಾಡುತ್ತದೆ.

ಇದಕ್ಕಾಗಿ ನೀವು ಒಂದೆರಡು ಲವಂಗಗಳನ್ನು ಹಲ್ಲು ನೋವು ಇರುವ ಜಾಗದಲ್ಲಿ ಇಟ್ಟುಕೊಂಡು ಸಣ್ಣದಾಗಿ ಜಗಿಯಬೇಕು. ಆಗ ಲವಂಗದಿಂದ ಬರುವ ರಸ ಹಲ್ಲುನೋವಿನ ಉಪಶಮನ ಮಾಡುವ ಕೆಲಸ ಮಾಡುತ್ತದೆ.

ಇದರ ಜೊತೆಗೆ ಇನ್ನೊಂದು ಪರಿಹಾರವನ್ನು ನೋಡುವುದಾದರೆ, ಒಂದು ಚೂರು ವೆಜಿಟೇಬಲ್ ಆಯಿಲ್ ಜೊತೆಗೆ ಒಂದೆರಡು ಲವಂಗ ಹಾಕಿಕೊಂಡು ಗೆಜ್ಜಿ ಪೇಸ್ಟ್ ತಯಾರು ಮಾಡಿ ಅದನ್ನು ನೋವಿರುವ ಜಾಗಕ್ಕೆ ಹಚ್ಚಬೇಕು ಅಥವಾ ಊದಿಕೊಂಡಿರುವ ವಸಡುಗಳ ಭಾಗಕ್ಕೆ ಹಚ್ಚಬೇಕು.

ಲವಂಗ ಹಲ್ಲು ನೋವಿಗೆ ಮಾತ್ರವಲ್ಲ ಮಧುಮೇಹ, ಕ್ಯಾನ್ಸರ್ ಅಪಾಯವನ್ನು ತಡೆಯುತ್ತದೆ

**ಬೆಳ್ಳುಳ್ಳಿ ಬಳಸುವುದು :** ಹಲ್ಲು ನೋವಿಗೆ ಇನ್ನೊಂದು ಪರಿಹಾರ ಎಂದರೆ ಅದು ಹಸಿ ಬೆಳ್ಳುಳ್ಳಿ. ಹೌದು, ಬೆಳ್ಳುಳ್ಳಿಯನ್ನು ಸಹ ಆಂಟಿಬಯೋಟಿಕ್ ಆಗಿ ಹಲ್ಲು ನೋವಿಗೆ ಬಳಸಬಹುದಾಗಿದೆ. ಬೆಳ್ಳುಳ್ಳಿ ವಸಡಿನ ಭಾಗದಲ್ಲಿ ಇರುವಂತಹ ಬ್ಯಾಕ್ಟೀರಿಯಗಳ ಪ್ರಭಾವವನ್ನು ಕಡಿಮೆ ಮಾಡಬಲ್ಲದು.

ಹಲ್ಲು ನೋವು ಬಂದಂತಹ ಸಂದರ್ಭದಲ್ಲಿ ಒಂದೆರಡು ಹಸಿ ಬೆಳ್ಳುಳ್ಳಿ ಜಗಿದು ಅದರ ರಸ ಕುಡಿಯ ಬೇಕು. ಇದಲ್ಲದೆ, ಬೆಳ್ಳುಳ್ಳಿಯನ್ನು ಜಜ್ಜಿ ಅದರ ಜೊತೆ ಉಪ್ಪು ಮಿಶ್ರಣ ಮಾಡಿ ನೋವಿರುವ ಹಲ್ಲು ಮತ್ತು ವಸಡಿನ ಭಾಗಕ್ಕೆ ಹಚ್ಚಿ ಸ್ವಲ್ಪ ಹೊತ್ತು ಬಿಡಬೇಕು.

**ಬಿಸಿ ನೀರು ಮತ್ತು ಉಪ್ಪಿನ ಬಳಕೆ :** ನೀವು ಅಡುಗೆ ಮನೆಯಲ್ಲಿ ರುಚಿಗಾಗಿ ಬಳಸುವ ಉಪ್ಪು ನಿಮ್ಮ ಹಲ್ಲು ನೋವಿನ ಉಪಶಮನಕ್ಕೆ ನೈಸರ್ಗಿಕವಾದ ರಾಮಬಾಣವಾಗಿ ಉಪಯೋಗಕ್ಕೆ ಬರುತ್ತದೆ. ಒಂದು ಲೋಟ ಉಗುರು ಬೆಚ್ಚಗಿನ ನೀರಿಗೆ ಅರ್ಧ ಟೀ ಚಮಚ ಉಪ್ಪು ಹಾಕಿ ಅದರಿಂದ ಬಾಯಿ ಮುಕ್ಕಳಿಸಬೇಕು. ದಿನದಲ್ಲಿ ಒಂದು ಮೂರ್ನಾಲ್ಕು ಬಾರಿ ಈ ರೀತಿ ಮಾಡುವುದರಿಂದ ಕ್ರಮೇಣವಾಗಿ ಹಲ್ಲು ನೋವು ಮತ್ತು ವಸಡುಗಳ ಸಮಸ್ಯೆ ಪರಿಹಾರವಾಗುತ್ತದೆ.

# ಮಹತ್ತರ ಸಂತಸಗಳ ಹುಡುಕಾಟದ ನಡುವೆ



ತುಂಬ ಬುದ್ಧಿವಂತನಾಗಿದ್ದ ಆ ವೃದ್ಧ ತನ್ನ ಹಳ್ಳಿಯ ಮುಖ್ಯಸ್ಥ. ಆತನ ಸಲಹೆ ಸೂಚನೆಗಳಿಲ್ಲದೇ ಹಳ್ಳಿಯ ಯಾವ ಕೆಲಸಕಾರ್ಯಗಳೂ ನಡೆಯುತ್ತಿರಲಿಲ್ಲ. ಹಳ್ಳಿಗರಿಗೆ ಆತನ ಮಾತೆಂದರೆ ವೇದವಾಕ್ಯ.ತಮ್ಮ ಖಾಸಗಿ ಸಮಸ್ಯೆಗಳ ಕುರಿತಾದ ಸಲಹೆಗಳಿಗಾಗಿಯೂ ಹಳ್ಳಿಗರು ಅವನನ್ನು ಭೇಟಿಯಾಗುತ್ತಿದ್ದರು. ದುರಂತವೆಂದರೆ ಇಂಥಹ ಬುದ್ಧಿವಂತ ಅಪ್ಪನಿಗೆ ಇದ್ದೊಬ್ಬ ಮಗ ಭಯಂಕರ ಸೋಮಾರಿ. ಯಾವುದೇ ಕೆಲಸ ಮಾಡದೆ ಬೀದಿಬೀದಿ ಸುತ್ತುತ್ತ,ಕುಡಿಯುತ್ತ ತಿನ್ನುತ್ತ, ಸ್ನೇಹಿತರೊಂದಿಗೆ ಕಾಲ ಕಳೆಯುವುದೊಂದೇ ಅವನ ಬದುಕಾಗಿ-ತ್ತು. ಮೊದಮೊದಲು ಅಪ್ಪ ಅವನನ್ನು ಗದರಿಸುತ್ತಿದ್ದ. ಮಗ ಕೊಂಚ ದೊಡ್ಡವನಾಗುತ್ತಿದ್ದಂತೆಯೇ ಗದರಿಸುವುದನ್ನು ಬಿಟ್ಟು ಪ್ರೀತಿಯಿಂದ ಬುದ್ದಿವಾದ ಹೇಳಿ ನೋಡಿದ. ಆದರೆ ಅಪ್ಪನ ಗದರಿಕೆಯಾಗಲಿ, ಪ್ರೀತಿಯಾಗಲಿ ಮಗನ ವರ್ತನೆಯಲ್ಲಿ ಯಾವ ಬದಲಾವಣೆಯನ್ನೂ ತರಲಿಲ್ಲ. ಹೆಚ್ಚುತ್ತಿರುವ ತನ್ನ ವಯಸ್ಸಿನೊಂದಿಗೆ ಮಗನ ಭವಿಷ್ಯದ ಚಿಂತೆ-ಯೂ ಹೆಚ್ಚಿತ್ತು ಊರ ಮುಖ್ಯಸ್ಥನಿಗೆ. ಹೇಗಾದರೂ ಸರಿ ತಾನು ಸಾಯುವುದರೊಳಗಾಗಿ ಮಗನನ್ನು ಸರಿದಾರಿಗೆ ತರಲೇಬೇಕೆಂದು ನಿಶ್ಚಯಿಸಿಕೊಂಡ ಹಿರಿಯ, ಅದೊಂದು ದಿನ ಮಗನನ್ನು ಕರೆದು, 'ಮಗು ನೀನಿನ್ನೂ ಚಿಕ್ಕ ಹುಡುಗನಲ್ಲ, ಬೆಳೆದು ನಿಂತಿರುವ ಯುವಕ. ಬದುಕನ್ನು ಅರ್ಥೈಸಿಕೊಂಡು, ನನ್ನ ಸಹಾಯವಿಲ್ಲದೇ ನಿನ್ನ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು ಹೋಗುವ ನೈಪುಣ್ಯತೆಯನ್ನು ನೀನೀಗ ಕಲಿಯಬೇಕಿದೆ' ಎಂದು ನುಡಿದ. ಅಸಲಿಗೆ ಬದುಕೆಂದರೆ ಏನೆಂದೇ ತಿಳಿಯದ ಉಂಡಾಡಿಗುಂಡ ಮಗ ಅಪ್ಪನ ಮಾತುಗಳನ್ನು ಕೇಳಿ ಕ್ಷಣಕಾಲ ಬೆಚ್ಚಿಬಿದ್ದ. 'ಏನು ಹೇಳುತ್ತಿರುವಿರಿ ಅಪ್ಪಾ, ಬದುಕಿನ ಪ್ರತಿಕ್ಷಣದಲ್ಲಿಯೂ ನೀವು ನನ್ನ ಜೊತೆಗಿರುತ್ತಿರಿ ಎಂದು ನಾನು ನಂಬಿದ್ದೆ. ಹೀಗೆ ಏಕಾಏಕಿ ನೀವು ನನ್ನ ಕೈಬಿಟ್ಟರೆ ಬಾಳಿನ ಜಂಜಡಗಳನ್ನು ನಿಭಾಯಿಸಲಾಗದೆ ನಾನು ಸತ್ತೇ ಹೋಗಬಹುದೇನೋ' ಎಂದು ನುಡಿದ ಮಗನ ದನಿಯಲ್ಲೊಂದು ಆತಂಕದ ಛಾಯೆ. ಮಗನ ಕಳೆಗುಂದಿದ ಮೊಗವನ್ನೊಮ್ಮೆ ನೋಡಿದ ವೃದ್ಧ, ಅವನನ್ನೊಮ್ಮೆ ಗಟ್ಟಿಯಾಗಿ ಆಲಂಗಿಸಿಕೊಂಡು, 'ಮಗು, ನಿನ್ನ ಬಾಳಿನ ನಿಜವಾದ ಉದ್ದೇಶವೇನು ಎಂಬುದನ್ನು ನೀನು ಕಂಡುಕೊಳ್ಳಲಿ ಎನ್ನುವುದು ನನ್ನ ಆಶಯ. ಹಾಗೆ ನಿನ್ನ ಬಾಳಿನ ಸಂಕಲ್ಪವನ್ನು ನೀನು ಕಂಡುಕೊಂಡು,ಬದುಕಿನ ಪಾಠಗಳನ್ನು ಸದಾಕಾಲ ನೆನಪಿಟ್ಟುಕೊಂಡು ಬದುಕಿದ್ದೇ ಆದರೆ ಸಂತಸ ತುಂಬಿದ ಸುಖಮಯ ಭವಿಷ್ಯ ನಿನ್ನದಾಗುತ್ತದೆ' ಎಂದು ನುಡಿದ. ಅಪ್ಪನ ಮಾತುಗಳನ್ನು ಕೇಳಿದ ಮಗನ ಮನಸ್ಸಿನಲ್ಲಿ ಸಂತಸ ಮತ್ತು ಆಶ್ಚರ್ಯಗಳ ಮಿಶ್ರಭಾವ. ತನ್ನನ್ನು ಸದಾಕಾಲ ಸುಖವಾಗಿಡಬಲ್ಲ ಪಾಠಗಳ ಬಗ್ಗೆ ಕುತೂಹಲ. ರಾತ್ರಿಯ ನಿದ್ದೆಯಲ್ಲಿ ಶಾಶ್ವತ ಸುಖದ ಕನವರಿಕೆ.

ಬೆಳಗಾಗುತ್ತಲೇ ಕೈಯಲ್ಲೊಂದು ಸಣ್ಣ ಚೀಲವನ್ನಿಡಿದು ಮಗನೆದುರು ಪ್ರತ್ಯಕ್ಷನಾದ ಹಿರಿಯ. ನಾಲ್ಕು ಜೊತೆ ಬಟ್ಟೆಗಳು, ಸ್ವಲ್ಪ ಧವಸ ಧಾನ್ಯಗಳು, ಕೊಂಚ ಹಣ ಮತ್ತೊಂದು ನಕ್ಷೆಯನ್ನು ಹೊಂದಿದ್ದ ಚೀಲವನ್ನು ಮಗನ ಕೈಗಿಡುತ್ತ' ನಿಧಿಯೊಂದನ್ನು ಹುಡುಕುವ ಕೆಲಸವನ್ನು ನಾನಿಂದು ನಿನಗೆ ಕೊಡುತ್ತಿದ್ದೇನೆ. ಚೀಲದಲ್ಲಿರುವ ನಕ್ಷೆಯಲ್ಲಿ ನಿಧಿಯನ್ನು ಹೂತಿಟ್ಟಿರುವ ಸ್ಥಳದ ವಿವರಗಳಿವೆ. ಅದನ್ನು ಹುಡುಕಿ ನಿನ್ನದಾಗಿಸಿಕೊಳ್ಳುವುದಷ್ಟೇ ನಿನ್ನ ಕೆಲಸ' ಎಂದು ಮುಗುಳ್ನಕ್ಕ. ಅಪ್ಪನ ಮಾತುಗಳನ್ನು ಕೇಳಿದ ಮಗನಲ್ಲೊಂದು ಅವ್ಯಕ್ತ ಸಂತಸದ ಕಾರಂಜಿ. 'ಓಹೋ..!! ಹಾಗಿದ್ದರೆ ಅಪ್ಪ ನಿನ್ನೇ ಹೇಳುತ್ತಿದ್ದ ಶಾಶ್ವತ ಸಂತೋಷದ ಕತೆ ಈ ನಿಧಿಯ ಕುರಿತಾಗಿಯೇ ಅಂತಾಯ್ತು. ಇದೊಂದು ನಿಕ್ಷೇಪವನ್ನು ಹುಡುಕಿಕೊಂಡು ಬಿಟ್ಟರೆ, ಬಾಳೆಲ್ಲ ಬಂಗಾರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ' ಎಂದುಕೊಂಡ ಮಗ ಅತ್ಯುತ್ಸಾಹದಿಂದ ಗುಪ್ತ ನಿಧಿಯನ್ನು ಹುಡುಕುತ್ತ ಮನೆಬಿಟ್ಟು ಹೊರನಡೆದ. ನಕ್ಷೆಯ ಪ್ರಕಾರ ನಿಧಿಯನ್ನು ಅಡಗಿಸಿಟ್ಟಿರುವ ಸ್ಥಳ ಸಾಕಷ್ಟು ದೂರವಿತ್ತು. ಹತ್ತಾರು ನದಿಗಳು, ಬೆಟ್ಟಗುಡ್ಡಗಳು, ದಟ್ಟಾರಣ್ಯಗಳನ್ನು ದಾಟಿ ತಾನು ನಿಧಿಯನ್ನು ಶೋಧಿಸಿ ತರುವವರೆಗೂ ತನ್ನ ಅಪ್ಪ ಆರೋಗ್ಯವಾಗಿರಲಿ ಎನ್ನುವ ಆಶಯ ಮಗನದ್ದು. ಹಾಗೆ ಮನೆಬಿಟ್ಟು ಹೊರನಡೆದ ಮಗನ ಪ್ರಯಾಣ ದಿನಗಳಿಂದ ವಾರಗಳಿಗೆ ವಾರಗಳಿಂದ ತಿಂಗಳುಗಳವರೆಗೆ ಸಾಗಿತು. ತನ್ನ ಪಯಣದ ನಡುವೆ ಆತನಿಗೆ ಹತ್ತು ಹಲವು ಬಗೆಯ ಅನುಭವಗಳಾದವು. ಆತ ವಿಭಿನ್ನ ಜನರನ್ನು ಭೇಟಿಯಾಗುತ್ತ ಸಾಗಿದ. ಕೆಲವರು ಆತನಿಗೆ ಆಶ್ರಯ ನೀಡಿದರೆ, ಹಲವರು ಆತನಿಗೆ ಅನ್ನದಾತರಾದರು. ಮಾರ್ಗಮಧ್ಯದಲ್ಲಿ ಸಿಕ್ಕ ಕಳ್ಳರು ಆತನ ವಸ್ತುಗಳನ್ನು ಕದಿಯಲೂ ಸಹ ಪ್ರಯತ್ನಿಸಿದರು. ಅನೇಕ ಸಂದರ್ಭಗಳಲ್ಲಿ ಆತ ದಿಕ್ಕೆಟ್ಟು ಹೋದಂತಾಗಿದ್ದನಾದರೂ ಎಲ್ಲವನ್ನೂ ಸಹಿಸಿಕೊಂಡು ತನ್ನ ಪ್ರಯಾಣವನ್ನು ಆತ ಮುಂದುವರೆಸಿದ್ದ. ನಿಧಾನವಾಗಿ ಋತುಗಳು ಬದಲಾಗಲಾರಂಭಿಸಿದ್ದವು. ಮಳೆಗಾಲ ಚಳಿಗಾಲವಾಗಿ ಬದಲಾಗಿದ್ದರೆ, ವಸಂತ ಕಾಲ ಗ್ರೀಷ್ಮವಾಗಿ ಮಾರ್ಪಾಡಾಗಿತ್ತು. ಪ್ರತಿಕೂಲ ಹವಾಮಾನದಲ್ಲಿ ತಾತ್ಕಾಲಿಕವಾಗಿ ತನ್ನ ಪಯಣವನ್ನು ನಿಲ್ಲಿಸುತ್ತಿದ್ದ ಅವನು, ವಾತಾವರಣ ತಿಳಿಯೆನ್ನಿಸಿದ ತಕ್ಷಣ ತನ್ನ ಪ್ರಯಾಣವನ್ನು ಮುಂದುವರೆಸುತ್ತಿದ್ದ. ತನಗಿಂತ ಮುಂಚೆಯೇ ಯಾರಾದರೂ ನಿಧಿಯನ್ನು ಕದ್ದುಬಿಟ್ಟಾರೆನ್ನುವ ಭಯ ಅವನಿಗೆ.

ಬರೊಬ್ಬರಿ ಒಂದು ಸಂವತ್ಸರದ ಪಯಣದ ನಂತರ ತನ್ನ ಗಮ್ಯವನ್ನು ತಲುಪಿಕೊಂಡಾಗ ಆತನ ಮನದಲ್ಲಿ ವರ್ಣಿಸಲಸದಳ ಆನಂದ. ನಕ್ಷೆಯಲ್ಲಿ ಅಪ್ಪ ಗುರುತು ಹಾಕಿದ್ದ ಮರದ ಬುಡದತ್ತ ಸಾಗಿದ ಅವನು ಅವಸರವಸರವಾಗಿ ನಿಧಿಗಾಗಿ ಹುಡುಕಾಡತೊಡಗಿದ. ನೆಲದ ಮೇಲೆ ನಿಧಿ ಕಾಣದಾದಾಗ ಬಹುಶಃ ಅಪ್ಪ ನೆಲದಾಳದಲ್ಲಿ ನಿಕ್ಷೇಪವನ್ನು ಹುದುಗಿಸಿಟ್ಟಿರಬೇಕು ಎಂದುಕೊಂಡು ನೆಲವನ್ನು ಅಗೆಯತೊಡಗಿದ. ಸತತ ಎರಡು ದಿನಗಳ ಪರಿಶೋಧನೆಯ ನಂತರವೂ ಚಿನ್ನದ ಸಣ್ಣದ್ದೊಂದು ತುಣುಕು ಸಹ ಅವನ ಕಣ್ಣಿಗೆ ಕಾಣದಂತಾದಾಗ ಅವನು ಸೋತು ಹೋದ. ಭಯಂಕರ ನಿರಾಸೆಯಿಂದ ವಾಪಸ್ಸಾಗುವ ನಿರ್ಧಾರಕ್ಕೆ ಬಂದ ಅವನ ಮನಸ್ಸಿನ ತುಂಬೆಲ್ಲ ಸುಳ್ಳು ಹೇಳಿದ ಅಪ್ಪನ ಬಗೆಗೊಂದು ಆಕ್ರೋಶ. ಕೋಪದಿಂದ ಧುಮುಗುಡುತ್ತಲೇ ವಾಪಸ್ಸು ಹೊರಟ ಆತನಿಗೆ ಹಿಂದಿರುಗುವ ಮಾರ್ಗದ ನಡುವೆ, ಋತುಗಳ ಬದಲಾವಣೆ, ಹವಾಮಾನದ ವೈಪರಿತ್ಯದಂತಹ ಮತ್ತದೇ ಹಳೆಯ ಅನುಭವಗಳಾಗತೊಡಗಿದವು. ಆದರೆ ಈ ಬಾರಿ ಆತ ಮುಂಚಿನಂತೆ ಧೃತಿಗೆಡಲಿಲ್ಲ. ವಸಂತದಲ್ಲರಳುವ ಹೂವುಗಳ ಸುವಾಸನೆಯನ್ನು ಆತ ಆಸ್ವಾಧಿಸಿದ್ದ. ಜಡಿಮಳೆಯಲ್ಲಿ ನರ್ತಿಸುವ ನವಿಲುಗಳ ನರ್ತನಕ್ಕೆ ಮನ ಸೋತಿದ್ದ. ಅದ್ಭುತವಾದ ಸೂರ್ಯಾಸ್ತವನ್ನು, ಪ್ರಶಾಂತವಾದ ಬೇಸಗೆಯ ಸಂಜೆಗಳನ್ನು ಆತ ಅನುಭವಿಸಿದ್ದ. ಹೊಟ್ಟೆಪಾಡಿಗಾಗಿ ಬೇಟೆಯಾಡುವುದನ್ನು ಕಲಿತಿದ್ದ ಆತನಿಗೆ ತನ್ನ ಬಟ್ಟೆಗಳನ್ನು ತಾನೇ ಹೊಲಿದುಕೊಳ್ಳುವುದೂ ಸಹ ರೂಢಿಯಾಗಿತ್ತು. ಪ್ರತಿಕೂಲ ಹವಾಮಾನವನ್ನು ಎದುರಿಸುತ್ತಲೇ ಸೂರ್ಯರಶ್ಮಿಯ ಸಹಾಯದಿಂದ ಕಾಲಮಾನವನ್ನು ಕಂಡುಕೊಳ್ಳುವ ವಿದ್ಯೆಯನ್ನು ಸಹ ಆತ ಕಲಿತ. ಅಪಾಯಕಾರಿ ವಿಷಜಂತುಗಳಿಂದ ರಕ್ಷಿಸಿಕೊಳ್ಳುವ ಚಾಣಾಕ್ಷತೆ ಅವನಿಗೆ ತಾನಾಗಿಯೇ ಅಭ್ಯಾಸವಾಗಿ ಹೋಗಿದ್ದರೇ, ವಿಷಕಾರಿ ಸಸ್ಯಗಳ ಬಗ್ಗೆ ಆತ ತನ್ನ ಪಯಣದುದ್ದಕ್ಕೂ ಅರಿತುಕೊಳ್ಳುತ್ತಲೇ ಎಚ್ಚರಿಕೆಯಿಂದ ಸಾಗಿದ. ಪ್ರಯಾಣದ ಆರಂಭದಲ್ಲಿ ತನಗೆ ಅನ್ನದಾತರಾಗಿದ್ದ, ಆಶ್ರಯದಾತರಾಗಿದ್ದ ಜನರನ್ನು ಮತ್ತೊಮ್ಮೆ ಭೇಟಿಯಾದ ಆತ ಅವರ ಸಣ್ಣಪುಟ್ಟ ಕೆಲಸಗಳಿಗೆ ನೆರವಾಗುವ ಮೂಲಕ ತನ್ನ ಕೃತಜ್ಞತೆಯನ್ನು ಸಲ್ಲಿಸಿದ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಆಗಂತುಕರಾದ ಅಲೆಮಾರಿಗಳಿಗೆ ಸಹಾಯ ಮಾಡುವ ಆ ಜನರ ಗುಣವನ್ನು ಅರಿತ ಆತ ನಿಜಕ್ಕೂ ಮೂಕವಿಸ್ಮಿತನಾಗಿದ್ದ.

ತಾನು ಮನೆಬಿಟ್ಟು ಎರಡು ವರ್ಷಗಳಷ್ಟು ಸಮಯವಾಯಿತು ಎಂದು ಅವನಿಗರಿವಾಗಿದ್ದು ಮನೆಯ ಹೊಸ್ತಿಲಿಗೆ ಬಂದು ನಿಂತಾಗಲೇ. ಮನೆ ತಲುಪಿದ ತಕ್ಷಣವೇ ಅಪ್ಪನ ಕೋಣೆಯತ್ತ ಧಾವಿಸಿದ. ಆತನಿಗೆ ಅಪ್ಪ ನೆಮ್ಮದಿಯಿಂದ ನಿದ್ರಿಸುತ್ತಿದ್ದದ್ದನ್ನು ಕಂಡು ಕೊಂಚ ನಿರಾಳವಾಯಿತು. ಮಲಗಿಕೊಂಡಿದ್ದ ಅಪ್ಪನ ಪಕ್ಕದಲ್ಲಿ ಕುಳಿತುಕೊಂಡ ಆತ ಪಿಸುದನಿಯಲ್ಲಿ 'ಅಪ್ಪ'ಎಂದ. ಅಪ್ಪನನ್ನು ನಿದ್ರೆಯಿಂದೆಬ್ಬಿಸಬಾರದೆಂಬ ಕಾಳಜಿ ಅವನದ್ದಾಗಿತ್ತಾದರೂ ಮಗನ ಮೆಲುದನಿಯನ್ನು ಕೇಳಿದ ವೃದ್ಧ ಎದ್ದುಕುಳಿತ. ಮಗನನ್ನು ಕಂಡ ಕ್ಷಣವೇ ಸಂತಸದಿಂದ ಅವನನ್ನು ಬಿಗಿದಪ್ಪಿಕೊಂಡು, 'ನಿನ್ನ ಪ್ರಯಾಣ ಹೇಗಿತ್ತು ಮಗು' ಎಂದು ಪ್ರೀತಿಯಿಂದ ಕೇಳಿದ. 'ಪ್ರಯಾಣ ನಿಜಕ್ಕೂ ಅದ್ಭುತವಾಗಿತ್ತು ಅಪ್ಪ' ಎಂದವನು ನುಡಿದ. ಮಾತು ಮುಂದುವರೆಸುತ್ತ 'ಆದರೆ ಕ್ಷಮಿಸಿ ಅಪ್ಪ, ನೀವು ಅಡಗಿಸಿಟ್ಟಿದ್ದ ನಿಧಿಯನ್ನು ಗಳಿಸಿಕೊಳ್ಳುವಲ್ಲಿ ನಾನು ವಿಫಲನಾದೆ, ನನಗದು ನಿಶ್ಚಿತ ಸ್ಥಳದಲ್ಲಿ ಸಿಗಲೇ ಇಲ್ಲ. ಬಹುಶಃ ಇನ್ಯಾರೋ ನನಗಿಂತಲೂ ಮೊದಲೇ ಅದನ್ನು ಹೊತ್ತೊಯ್ದಿರಲಿಕ್ಕೂ ಸಾಕು' ಎಂದು ಹೇಳಿದ ಮಗನ ಧ್ವನಿಯಲ್ಲೊಂದು ತಪ್ಪಿತಸ್ಥ ಭಾವ. ಅಪ್ಪನ ಮೇಲಿದ್ದ ತನ್ನ ಕೋಪ ತಾನಾಗಿಯೇ ಕರಗಿಹೋಗಿ ತನ್ನಲ್ಲೊಂದು ತಪ್ಪಿತಸ್ಥ ಭಾವ ಹುಟ್ಟಿಕೊಂಡಿದ್ದು ಸ್ವತಃ ಆತನಲ್ಲೊಂದು ಆಶ್ಚರ್ಯವನ್ನುಂಟು ಮಾಡಿತ್ತು. ತನ್ನಲ್ಲಾಗುತ್ತಿರುವ ಧನಾತ್ಮಕ ಬದಲಾವಣೆಗಳು ಅವನ ಬೆರಗಿಗೆ ಕಾರಣವಾಗಿದ್ದವು.

'ಅಲ್ಲಿ ಖಜಾನೆ ಇದ್ದಿದ್ದರೇ ತಾನೇ ನಿನಗೆ ಸಿಗುವುದಕ್ಕೆ, ಅಲ್ಲಿ ಯಾವ ಖಜಾನೆಯೂ ಇರಲಿಲ್ಲ ಮಗನೇ..' ಎಂದ ಅಪ್ಪನ ಮುಖದಲ್ಲೊಂದು ಸಣ್ಣ ಮಂದಹಾಸ. 'ಖಜಾನೆಯೇ ಇರಲಿಲ್ಲವಾ..?? ಹಾಗಿದ್ದರೆ ನೀವು ನನ್ನನ್ನಲ್ಲಿ ಕಳುಹಿಸಿದ್ದೇಕೆ ಅಪ್ಪ' ಎಂಬ ಕುತೂಹಲ ತುಂಬಿದ ಮರುಪ್ರಶ್ನೆ ಪುತ್ರನದ್ದು. 'ನಿನ್ನ ಪ್ರಶ್ನೆಗೆ ನಾನು ಉತ್ತರವನ್ನು ಹೇಳುವ ಮುನ್ನ ನನ್ನ ಪ್ರಶ್ನೆಗೆ ನೀನು ಉತ್ತರಿಸು ಮಗು, ಇಲ್ಲಿಂದ ಹೊರಬಿದ್ದ ನಂತರ ನಿನ್ನ ಆರಂಭಿಕ ಪ್ರಯಾಣ ಹೇಗಿತ್ತು ಎಂದು ಮೊದಲು ವಿವರಿಸು. ದಾರಿಯಲ್ಲಿ ನಿನಗೆ ಸಿಕ್ಕ ವಿಭಿನ್ನ ಪ್ರದೇಶಗಳು, ಬದಲಾಗುತ್ತ ಸಾಗಿದ ಋತುಗಳು ನಿನ್ನ ಮನಸ್ಸಿಗೆ ಮುದ ನೀಡಿದವೇ..? ದಾರಿಯಲ್ಲಿ ಸಿಕ್ಕ ಹೊಸಹೊಸ ಜನರ ಸ್ನೇಹವನ್ನು ನೀನು ಸಂಪಾದಿಸಿದೆಯಾ'? ಎಂದು ಪ್ರಶ್ನಿಸಿದ ಹಿರಿಯ. 'ಖಂಡಿತವಾಗಿಯೂ ಇಲ್ಲ ಅಪ್ಪ. ಇಲ್ಲಿಂದ ಹೊರಟ ಕ್ಷಣದಿಂದ ನನ್ನ ಗಮನವೆಲ್ಲ ನಿಧಿಯ ಗಳಿಕೆಯ ಮೇಲೆಯೇ ಇದ್ದುದರಿಂದ ನಾನು ಪಯಣವನ್ನು ಎಳ್ಳಷ್ಟೂ ಅನುಭವಿಸಲಿಲ್ಲ. ಅದರೆ ವಾಪಸ್ಸು ಬರುವಾಗಿನ ಕತೆ ಬೇರೆ. ದಾರಿಯಲ್ಲಿ ನಾನು ಅನೇಕ ಸ್ನೇಹಿತರನ್ನು ಸಂಪಾದಿಸಿಕೊಂಡೆ. ಹತ್ತಾರು ಹೂವುಗಳ ಅರಳುವಿಕೆಯನ್ನು ಕಂಡು ಸಂತಸಪಟ್ಟೆ. ಕೆಲವು ವಿದ್ಯೆಗಳನ್ನು ಕಲಿತುಕೊಂಡೆ. ಹಿಂದಿರುಗುವಾಗಿನ ಪಯಣವನ್ನು ಅದೆಷ್ಟು ಉತ್ಕಟವಾಗಿ ಅನುಭವಿಸಿದೆನೆಂದರೆ ನಿಧಿ ಸಿಗಲಿಲ್ಲವೆನ್ನುವ ನನ್ನ ನಿರಾಸೆಯೂ ಮಾಯವಾಗಿ ಹೋಗಿತ್ತು' ಎಂದುತ್ತರಿಸಿದ ಮಗ. ಮಗನ ಮಾತುಗಳಿಗೆ ಮುಗುಳ್ನಕ್ಕು ಮಗನ ಮೈದಡವಿದ ಅಪ್ಪ, 'ಬದುಕೂ ಸಹ ನಿನ್ನ ಪಯಣದಂತೆ-ಯೇ ಮಗು. ನಿನ್ನ ಬಾಳಿನ ಗುರಿಯೆನ್ನುವ ಅಗೋಚರ ನಿಧಿಯತ್ತ ಸಾಗುತ್ತ ಬದುಕಿನ ಅನುಕ್ಷಣವನ್ನು ಅನುಭವಿಸದಂತಾಗಿಬಿಟ್ಟರೇ ಬಾಳಿನಲ್ಲಿ ಸಂತಸವನ್ನು ಕಂಡುಕೊಳ್ಳಲಾಗದು. ಗುರಿಯೆನ್ನುವ ಖಜಾನೆಯತ್ತ ಲಕ್ಷ್ಯವಿಡುತ್ತ ಸಾಗುವ ನಾವುಗಳು ಬದುಕಿನ ಅದೆಷ್ಟೊ ಸಂತೋಷಗಳನ್ನು ಕಳೆದುಕೊಂಡುಬಿಡುತ್ತೇವೆ. ಅಸಲಿಗೆ ಬದುಕಿನಲ್ಲಿ ಗುರಿಯೆನ್ನುವುದೇ ಇಲ್ಲ, ಬದುಕನ್ನು ಉತ್ಕಟವಾಗಿ ಬದುಕುತ್ತ ದಿನದಿಂದ ದಿನಕ್ಕೆ ಪರಿಪಕ್ವವಾಗಿ ಸಾಗುವುದೇ ಬಾಳಿನ ನಿಜವಾದ ಉದ್ದೇಶ' ಎಂದು ನುಡಿದು ಸುಮ್ಮನಾದ. ಅವರಿಬ್ಬರ ನಡುವ ಒಂದು ಕ್ಷಣದ ನೆಮ್ಮದಿಯ ಮೌನ. ಮಗನಿಗದು ಜ್ಞಾನೋದಯದ ಕಾಲ.

ನಿಜಕ್ಕೂ ತುಂಬ ಅರ್ಥಪೂರ್ಣ ಕತೆಯಿದು. ನಮ್ಮಲ್ಲಿ ಬಹುತೇಕರು ಕತೆಯಲ್ಲಿ ಕಾಣಸಿಗುವ ಮಗನಂತವರು. ಕಣ್ಣೆದುರಿಗಿನ ಚಿಕ್ಕಪುಟ್ಟ ಸಂತಸಗಳನ್ನು ಬಿಟ್ಟು, ಕಾಣದ ಇನ್ಯಾವುದೋ ಮಹಾಸಂತಸದ ಬೆನ್ನಟ್ಟುತ್ತೇವೆ. ವಾಸ್ತವದಲ್ಲಿ ಅಂಥದ್ದೊಂದು ಸಂತಸವೇ ಅಸ್ತಿತ್ವದಲ್ಲಿಲ್ಲ ಎನ್ನುವುದರ ಅರಿವಾಗುವ ಹೊತ್ತಿಗೆ ಕಾಲಮಿಂಚಿಹೋಗಿರುತ್ತದೆ. ಸಿನಿಮಾದಲ್ಲಿ ಅವಿಭಾಜ್ಯ ಕುಟುಂಬಗಳು ನಮ್ಮ ಕಣ್ತುಂಬುತ್ತವೆ. ಮನೆಯಲ್ಲಿನ ನಾಲ್ಕೇ ನಾಲ್ಕು ಸದಸ್ಯರೊಡಗೂಡಿ ಊಟ ಮಾಡುವ ವ್ಯವಧಾನ ನಮಗಿರದು. ನಯಾಗಾರ ಜಲಪಾತವನ್ನು ನೋಡಬೇಕೆನ್ನುವ ಹಂಬಲ, ಪಕ್ಕದೂರಿನ ಜೋಗದೆಡೆಗೆ ತಾತ್ಸಾರ. ಹೋಟೆಲ್ಲೊಂದರಲ್ಲಿ ಸಾವಿರಾರು ರೂಪಾಯಿ ಖರ್ಚು ಮಾಡಿ ಊಟ ಮಾಡುವ ಉಮ್ಮೇದಿ, ಮನೆಯಲ್ಲಿಯೇ ನಾಲ್ಕಾರು ಬಗೆಯ ಅಡುಗೆ ತಯಾರಿಸುವ ಸಂತಸದೆಡೆಗೆ ತಾತ್ಸಾರ. 'ಮಹತ್ತರವಾದ ಸಂತಸವೊಂದರ ಹುಡುಕಾಟದಲ್ಲಿ, ಬದುಕಿನ ಸಾವಿರಾರು ಚಿಕ್ಕಚಿಕ್ಕ ಸುಖಗಳನ್ನು ನಾವು ಕಳೆದುಕೊಳ್ಳುತ್ತೇವೆ' ಎನ್ನುತ್ತಾಳೆ ಆಂಗ್ಲ ಸಾಹಿತಿ ಪರ್ಲ್ ಎಸ್ ಬಕ್. ಬಹುಶಃ ಆಕೆಯ ಮಾತಿನ ಹಿಂದಿನ ಸತ್ಯವನ್ನರಿತು ನಡೆದರೆ ಬದುಕು ನಿಜಕ್ಕೂ ಅರ್ಥಪೂರ್ಣ ಅಲ್ಲವೇ....??

– ಗುರುರಾಜ ಕೋಡ್ಕಣಿ
ಯಲ್ಲಾಪುರ
(ನಿಲುಮೆ ಕೃಪೆ)

– * * * –

### ಇಂದಿನ ಪಂಚಾಂಗ

ಶುಭಕೃತಿ ನಾಮ ಸಂವತ್ಸರ

ಆಯನ: ಉತ್ತರಾಯಣ
ಋತು: ಸೌರ ಶಿಶಿರಮಾಸ: ಮಾರ್ಗಶಿರ
ಪಕ್ಷ: ಕೃಷ್ಣ
ನಕ್ಷತ್ರ: ಮೂಲ
ತಿಥಿ: ಅಮಾವಾಸ್ಯೆ
ವಾರ: ಶುಕ್ರವಾರ
ಸೂರ್ಯೋದಯ: 07:10 ಸೂರ್ಯಾಸ್ತ: 18:05
ರಾಹು ಕಾಲ: 10:30–12:00
ಯಮಘಂಟ ಕಾಲ: 3:00–04:30
ಗುಳಿಕಕಾಲ ಕಾಲ: 07:30–9:00
ಶುಭ ಸಂಖ್ಯೆ: 9, 13, 16, 19, 29

### ದಿನ ಭವಿಷ್ಯ

**ಮೇಷ:** ಒತ್ತಡದ ಕೆಲಸದ ವೇಳಾಪಟ್ಟಿ ನಿಮ್ಮ ಸಹನೆಯನ್ನು ಕೆಣಕಬಹುದು. ಇಂದು ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು.

**ವೃಷಭ:** ಬಿಡುವಿಲ್ಲದ ಬೀದಿಗಳಲ್ಲಿ, ನಿಮ್ಮ ಪ್ರಿಯತಮೆಯೇ ಅತ್ಯುತ್ತಮವಾಗಿರುವುದರಿಂದ ನೀವು ಅದೃಷ್ಟಶಾಲಿಗಳು ಎಂದು ನಿಮಗೆ ಅರಿವಾಗುತ್ತದೆ.

**ಮಿಥುನ:** ಆರೋಗ್ಯ ಚೆನ್ನಾಗಿರುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ಕರ್ಕ:** ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು. ಇತ್ತೀಚೆಗೆ ನಿಮ್ಮ ವೈಯಕ್ತಿಕ ಜೀವನ ನಿಮ್ಮ ಗಮನದ ಕೇಂದ್ರಬಿಂದುವಾಗಿದೆ.

**ಸಿಂಹ:** ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ.

**ಕನ್ಯಾ:** ನೀವು ಇಂದು ಆ ಹೆಚ್ಚುವರಿ ಚೈತನ್ಯವನ್ನು ಹೊಂದಿರುತ್ತೀರಿ ಹಾಗೂ ಇದು ನಿಮ್ಮನ್ನು ನಿಮ್ಮ ಗುಂಪಿಗಾಗಿ ಸಮಾರಂಭವನ್ನು ಸಂಯೋಜಿಸುವಂತೆ ಮಾಡುತ್ತದೆ.

**ತುಲಾ:** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ. ಒಳ್ಳೆಯ ಸಮಯ ಬರುವುದು.

**ವೃಶ್ಚಿಕ:** ನಿಮ್ಮ ಬಾಲ್ಯದ ನೆನಪುಗಳು ನಿಮ್ಮನ್ನು ಆವರಿಸಿಕೊಳ್ಳುತ್ತವೆ. ಈ ಪ್ರಕ್ರಿಯೆಯಲ್ಲಿ ನಿಮಗೆ ನೀವೇ ಅನಗತ್ಯ ಮಾನಸಿಕ ಒತ್ತಡ ನೀಡಬಹುದು.

**ಧನು** ನಿಮ್ಮ ಆರ್ಥಿಕ ಪರಿಸ್ಥಿತಿ ಹದಗೆಡಬಹುದು. ಸ್ನೇಹಿತರು, ವ್ಯಾಪಾರ ಪಾಲುದಾರರು ಹಾಗೂ ಸಂಬಂಧಿಗಳ ಜೊತೆ ವ್ಯವಹರಿಸುವಾಗ ನಿಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಿ.

**ಮಕರ:** ಸೃಜನಶೀಲ ಕೆಲಸ ನಿಮ್ಮನ್ನು ಶಾಂತವಾಗಿರಿಸುತ್ತವೆ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ.

**ಕುಂಭ** ಕಾರ್ಯನಿರತ ದಿನಚರಿಯ ಹೊರತಾಗಿಯೂ ನೀವು ನಿಮಗಾಗಿ ಸಮಯವನ್ನು ತೆಗೆಯಲು ಸಾಧ್ಯವಾಗುತ್ತದೆ. ಒಬ್ಬ ಆಸಕ್ತಿದಾಯಕ ವ್ಯಕ್ತಿಯನ್ನು ಭೇಟಿ ಮಾಡುವ ಸಾಧ್ಯತೆಗಳಿವೆ.

**ಮೀನ:** ನೀವು ನಿಮ್ಮ ವಸ್ತುವನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು. ಕೆಲಸದಲ್ಲಿ ಇಂದು ಫಲ ನೀಡುತ್ತದೆ. ಇಂದು ಖಾಲಿ ಸಮಯವೂ ಕೆಲವು ಅನುಪಯುಕ್ತ ಕೆಲಸಗಳಲ್ಲಿ ಹಾಳಾಗಬಹುದು.

# ಕನಸಿನ ಬಂಡಿಗೆ ನಿಲ್ದಾಣವಿಲ್ಲ



ಅದು ಫೆಬ್ರವರಿಯ ಥಂಡಿ ಸುರಿಯುವ ರಾತ್ರಿ. ನಕ್ಷತ್ರಗಳ ಹಿಮ್ಮೇಳದಲ್ಲಿ ಬೆಳ್ಳನೆ ಬೆಳದಿಂಗಳು ಚೆಲ್ಲುತ್ತಾ ಚಂದಿರ ಸವಾರಿ ಹೊರಟಿರುವಾಗಲೇ ಜಮ್ಮುತಾವಿ ಎಕ್ಸ್‌ಪ್ರೆಸ್ ರೈಲು ಯಾವುದೋ ಗೋಧಿಯ ಬಯಲುಗದ್ದೆಗಳ ನಡುವೆ ಮಂಜು ಪರದೆ ಸೀಳುತ್ತಾ ಓಡುತ್ತಿದೆ.

ರೇಲು ಗಾಡಿಯ ಸ್ಲೀಪರ್ ಕೋಚ್ ಎಸ್–8ರಲ್ಲಿ ಇರುವ ಕೆಲವೇ ಪ್ರಯಾಣಿಕರು ತಮ್ಮ ಇಹಲೋಕ ಪರಿವೆಯೆಲ್ಲ ಮರೆತು ನಿದ್ರೆ ಮಾಡುತ್ತಿದ್ದರೆ ಇಡೀ ಬೋಗಿಯೇ ಆಲಸ್ಯದಿಂದ ತುಂಬಿರುವಂತೆ ಕಾಣುತ್ತದೆ. ಮಬ್ಬು ಬೆಳಕಲ್ಲಿ ಅಪ್ಪರ್ ಬರ್ತ್‌ನಲ್ಲಿ ಬ್ಯಾಗ್‌ಗೆ ಬೆನ್ನು ಕೊಟ್ಟು ನಿದ್ರಿಸಲು ಯತ್ನಿಸುತ್ತಿದ್ದಾನೆ ಆ 25ರ ಹುಡುಗ. ಆತ ಮಗ್ಗುಲಾಗಿ ಮಲಗಿದ್ದಾನೆ.

ಕಣ್ಣೆವೆ ಮುಚ್ಚಿಕೊಂಡರೆ ಸಾಕು ಆಕೆ ಕಣ್ಣಮುಂದೆ ಬರುತ್ತಾಳೆ. ಕಣ್ಣೆವೆ ತೆರೆದರೆ ಅಲ್ಲೇ ಮುಂಭಾಗದ ಮಧ್ಯೆಯ ಬರ್ತ್‌ನಲ್ಲೇ ಮಲಗಿದ್ದಾಳೆ. ಆಕೆಯ ಕಂಗಳಲ್ಲೂ ಈತನ ಪ್ರತಿಬಿಂಬ ಕಂಡಂತಿದೆ. ನಿನ್ನೆ ಬೆಳಗ್ಗಿನಿಂದ ಆತನಿಗೆ ಆಕೆ ಪರಿಚಯವಾಗಿದ್ದಾಳೆ, ಚೂಡಿದಾರ್ ಉಟ್ಟ ಸರಳ ಹುಡುಗಿ.

ಮಾತಿಗಾಗಿ ಆತನೂ ತಡವರಿಸಿದ್ದಾನೆ. ಆಕೆ-ಯೂ ಅಂತಹಾ ಮಾತುಗಾರ್ತಿ ಅಲ್ಲ. ಆಕೆ-ಯ ತಂದೆ ತಾಯಿ ಅಲ್ಲೇ ಕೆಳಗಿನ ಎರಡು ಬರ್ತ್‌ಗಳಲ್ಲಿ ಮಲಗಿದ್ದಾರೆ.

ಅವರು ಬೇಕೆಂದಾಗ ಪೇಪರನ್ನೋ, ನೀರನ್ನೋ ತಂದು ಕೊಟ್ಟು ಈತ ಉಪಕಾರ ಮಾಡಿದ್ದಿದೆ. ನನ್ನ ಬಗ್ಗೆ ಅವರೇನಂದುಕೊಂಡಿರಬಹುದು ಎಂದು ಆತ ಚಿಂತೆ ಮಾಡಿಲ್ಲ, ಆದರೆ ಗುಲಾಬಿ ವರ್ಣದ ಚೂಡಿದಾರದ ಆ ಚೆಲುವೆ ಮುಖ ನೋಡಿ ನಕ್ಕಾಗೆಲ್ಲ ಈತ ನಡುಗುತ್ತಾನೆ.

ಈ ಮಂಗಳೂರು ಹುಡುಗನಿಗೆ ಕನ್ನಡ, ಇಂಗ್ಲಿಷ್ ಬರುತ್ತದೆ. ವಿಚ್ ಪ್ಲೇಸ್ ಆರ್ ಯೂ ಫ್ರಂ, ಓ... ಯು ಆರ್.ಕನ್ನಡಿಗ... ಎಂದು ಪರಿಚಯ ಅಷ್ಟೇ ಮಾಡಿಕೊಂಡಿದ್ದಾಳೆ. ಆಕೆ ಅಹ್ಮದಾಬಾದ್‌ನವಳು.

ಇನ್ನು ಮೂರು–ನಾಲ್ಕು ಗಂಟೆಯಲ್ಲಿ ಬೆಳಗಾಗುವಾಗ ಅಹ್ಮದಾಬಾದ್ ಸ್ಟೇಷನ್ ಬರುತ್ತದೆ. ಆಕೆ ಅಲ್ಲಿ ಇಳಿಯುತ್ತಾಳಂತೆ. ಬೆಳಗ್ಗಿನಿಂದಲೇ ಆಗಾಗ್ಗೆ ಮೊಬೈಲ್‌ನಲ್ಲಿ ಮೆಸೇಜ್ ನೋಡುತ್ತಿದ್ದವಳು, ಆಕೆ-ಯ ಪ್ರಿಯಕರನ ಅಲ್ಲ, ಗೆಳೆಯರ ಸಂದೇಶ ಓದುತ್ತಿದ್ದಳೋ ಏನೋ. ಮಧ್ಯಾಹ್ನ ನಂತರ ಮೊಬೈಲ್ ನೋಡಿಲ್ಲ. ರೋಮಿಂಗಲ್ವಾ ಅಂತ ಬೆಂಗಳೂರು ಹುಡುಗ ಮೊಬೈಲ್ ಆಫ್ ಮಾಡಿಟ್ಟಿದ್ದಾನೆ.

ಆಕೆಯ ಮೇಲೆ ಆತನಿಗೆ ಪ್ರೇಮವೇ, ಆಕರ್ಷಣೆಯೇ ಗೊತ್ತಿಲ್ಲ. ಗುಜರಾತಿ ಹುಡುಗಿ ಮನದೊಳಗೆ ಗೂಡು ಕಟ್ಟಿದಳೇ? ಆತನಿಗೆ ಗೋಜಲು.

'ನೀ ಹೋದರೆ ಮತ್ತೆ ನನ್ನ ಒಂದು ದಿನದ ಪ್ರಯಾಣ ಮಹಾ ಬೋರಿಂಗ್' ಎನ್ನ ಹೊರಟಾಗ ರೇಲು ಇಂಜಿನ್ ಸುರಂಗ ಹೊಕ್ಕು ಕರ್ಕಶವಾಗಿ ಸೀಟಿ ಹಾಕುತ್ತಾ ವೇಗ ಹೆಚ್ಚಿಸಿಕೊಂಡಿವೆ. ಮಾತುಗಳನ್ನು ಹುಡುಗ ನುಂಗಿಕೊಂಡಿದ್ದಾನೆ. ಈತನ ಮುಖವನ್ನೇ ನೋಡುತ್ತಿದ್ದಾಕೆ ನುಂಗಿದ ಮಾತುಗಳನ್ನು ಹೆಕ್ಕಿಕೊಂಡಂತೆ ಮುಗುಳ್ನಗುತ್ತಾಳೆ. ಕಿಟಕಿಯಿಂದ ಒಳಹೊಕ್ಕ ಕುಳಿರ್ಗಾಳಿಗೆ ಮಲಗಿದ್ದವಳ ತಲೆಕೂದಲಿನ ಜೊಂಪೆ ಒಮ್ಮೆ ಮೇಲೆದ್ದು ಅಲೆ ಅಲೆಯಾಗಿ ಕಣ್ಣು, ಕೆನ್ನೆ ಮೇಲೆ ಜಾರುತ್ತಾ ಮುಖವನ್ನು ಆವರಿಸಿದ ದೃಶ್ಯ ಮನಃಪಟಲದಲ್ಲಿ ಅಚ್ಚೊತ್ತಿದೆ.

ಚಂದಿರ ರಾತ್ರಿ ಪಾಳಿ ಮುಗಿಸಿ ಬದಿಗೆ ಸರಿಯಲಿದ್ದಾನೆ, ಸೂರ್ಯನಿಗೆ ಹೊಸ ಪಾಳಿ ಇನ್ನು. ಪಾಳಿ ಬದಲಾವಣೆಯಾಗುವಾಗ ಆಕೆ ತನ್ನವರೊಂದಿಗೆ ರೈಲ್ವೇ ನಿಲ್ದಾಣದಲ್ಲಿ ಇಳಿದು ಬಿಡುತ್ತಾಳೆ. ಆಕೆ ಮಲಗಿದ್ದ ಬರ್ತ್‌ಗೆ ಇನ್ಯಾರೋ ಬಂದು ಬಿಡುತ್ತಾರೆ ಎಂಬ ನೆನಪುಗಳೇ ಈಗ ಆತನನ್ನು ಇರಿಯುತ್ತವೆ.

ಎಷ್ಟೊಂದು ಮಾತುಗಳು ಮನದ ಫ್ಯಾಕ್ಟರಿಯಲ್ಲಿ ಸಿದ್ಧಗೊಳ್ಳುತ್ತಿದ್ದವು, ಆಕೆಯ ಪಿಂಕ್ ಚೂಡಿ, ಅಲೆ ಅಲೆಗೂದಲು, ಗುಜರಾತಿ ಮಿಶ್ರಿತ ಇಂಗ್ಲಿಷ್, ಕಣ್ಣಿನ ನೇರನೋಟ ಇವೆಲ್ಲ ಸೇರಿ ಆತನಿಗೆ ಆಕೆಯ ಬಗ್ಗೆ ಯಾವ ಭಾವನೆ ಮೂಡುತ್ತಿದೆ ಎನ್ನುವುದನ್ನು ಇನ್ನೂ ನಿರ್ಧಾರ ಮಾಡುವ ಮೊದಲೇ ಆಕೆ ಹೊರಟು ಹೋಗುವವಳಿದ್ದಾಳೆ. ಆಕೆ ಇನ್ನೊಂದಿಷ್ಟು ಹೊತ್ತು ತನ್ನೊಂದಿಗಿದ್ದರೆ...

ಆತನ ಮನದ ಕೊರಗು ಆಕೆಗೂ ಇತೆ-ೀ ಗೊತ್ತಿಲ್ಲ.... ಸಂಜೆಯಾದಾಗ ಮುದುಡುವ ಗುಲಾಬಿಯಂತಿರುವ ಮುಖ ಏನೋ ಹೇಳುತ್ತಿದೆ.

ಈಗ ಬೆಳಕು ಹರಿದಿದೆ. ವೇಗ ಇಳಿಸಿದ ರೇಲು ನಿಲ್ದಾಣದತ್ತ ಜಾರುತ್ತಿದೆ. ಆಕೆಯ ಪೋಷಕರು ಬ್ಯಾಗೇರಿಸಿದ್ದಾರೆ. ಆಕೆಯೂ ತನ್ನ ತುರುಬು ಕಟ್ಟಿಕೊಂಡು ನಿದ್ದೆಗಣ್ಣಿಗೆ ತಣ್ಣೀರೆರಚಿ ಬಂದು ಸಿದ್ಧಳಾಗುತ್ತಿದ್ದಾಳೆ, ಆತನ ಕನಸಿನ ಬಂಡಿಯಿಂದ ಇಳಿದು ಹೋಗುವುದಕ್ಕೆ.

ಪ್ಲಾಟ್‌ಫಾರಂ ಬಂದು ನಿಂತಿದೆ ರೇಲು, ಆಕೆಯ ಹೆತ್ತವರ ಕೈಲಿದ್ದ ಬ್ಯಾಗ್ ಈತ ತೆಗೆದುಕೊಂಡಿದ್ದಾನೆ, ಅವರನ್ನು ಕೆಳಗಿಳಿಸಿ, ಬ್ಯಾಗ್ ಕೈಗೆ ಕೊಡುತ್ತಾನೆ. ಹಮ್ ಫಿರ್ ಮಿಲೇಂಗೇ... ನಕ್ಕ ಆಕೆಯ ತಂದೆ ಹುಡುಗನ ಬೆನ್ನು ಸವರಿದ್ದಾನೆ, ತಾಯಿಗಂಟಿ ನಿಂತ ಹುಡುಗಿ ತೀಕ್ಷ್ಣವಾಗಿ ಈತನತ್ತ ನೋಡುತ್ತಾಳೆ.

ಆಕೆಯ ಮೊಬೈಲ್ ನಂಬರ್ ಕೇಳಿ ಬಿಡಲೇ ಬೇಕೇ ಎನ್ನುವ ಗೊಂದಲದಲ್ಲಿದ್ದಾನೆ ಹುಡುಗ. ಆಗಲೇ ರೈಲು ಹೊರಟಿದೆ ಮತ್ತೆ...

ಒಲವೂ ಅಲ್ಲದ, ಸ್ನೇಹವೂ ಅಲ್ಲದ ನವಿರು ಭಾವಗಳ ಕನಸು ಹಾಗೇ ಹರಿಯಲಿ ಎನ್ನುತ್ತಾ ಹುಡುಗ ಅವ್ಯಕ್ತ ನೋವಿನಿಂದ ತಿರುಗಿಯೂ ನೋಡದೆ ರೈಲು ಏರಿದ್ದಾನೆ.... ಲವ್ ಯೂ ಎಂದು ಕೂಗಿ ಹೇಳೋಣ ಎಂದು ಬಾಯ್ತೆರೆದರೆ ಮತ್ತೆ ಅದೇ ರೈಲಿನ ಸೀಟಿ...

ಮಾತುಗಳು ಬಾಯಲ್ಲೇ ಉಳಿದಿವೆ.... ಆಕೆಯ ಕಂಗಳ ಅಂಗಳದಲ್ಲೆ ಹೊಳೆದ ಕಂಬನಿ ಮಾತ್ರ ಇನ್ನೂ ಹುಡುಗನ ಕಂಗಳಲ್ಲಿ ಶಾಶ್ವತವಾಗಿವೆ.

– ವೇಣುವಿನೋದ್
(ನಿಲುಮೆ ಕೃಪೆ)

– * * * –